# <u>ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ</u>

## <u>ಸಿ.ಸಿ. 1577/2019</u>

<u>ಸಾಕ್ಷಿದಾರರ ಹೇಳಿಕೆಃ</u>

| | | | |
|---|---|---|---|
| **ಹೆಸರು** | : ಅಶೋಕ ಬಿ ಆರ್ | ಡಿಡಬ್ಲ್ಯೂಃ **2** |
| **ತಂದೆಯ ಹೆಸರು** | : ರಮೇಶ್ ನಾಯ್ಕ | |
| **ವಯಸ್ಸು** | : 44 ವರ್ಷ | |
| **ವೃತ್ತಿ** | : ಬ್ಯಾಂಕ್ ಮ್ಯಾನೇಜರ್ | |
| **ವಾಸಸ್ಥಳ** | : ಹೊನ್ನಾಳಿ | |

ದಿನಾಂಕಃ **18-02-2025** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ :-ಆರೋಪಿ ಪರ ವಕೀಲರಿಂದ:-</u>

ದಿಃ 24-12-2024 ರಿಂದ ಇಲ್ಲಿಯವರೆಗೂ ಕರ್ನಾಟಕ ಬ್ಯಾಂಕ್ ಹೊನ್ನಾಳಿ ಶಾಖೆಯಲ್ಲಿ ವ್ಯವಸ್ಥಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ನಿಪಿ-1 ಚಕ್ಕು ಕರ್ನಾಟಕ ಬ್ಯಾಂಕ್ ನ ಬೆಳಗುತ್ತಿ ಶಾಖೆಗೆ ಸಂಬಂಧಪಟ್ಟದ್ದಾಗಿರುತ್ತದೆ. ನಿಪಿ-1 ಚಕ್ಕು ಸಿದ್ದನಗೌಡ ರವರ ಖಾತೆಗೆ ಸಂಬಂಧಪಟ್ಟದ್ದಾಗಿರುತ್ತದೆ. ನಿಡಿ-1 ದಾಖಲೆಯು ಸಿದ್ದನಗೌಡ ರವರು ಖಾತೆಯನ್ನು ತೆಗೆಯುವ ಸಮಯದಲ್ಲಿ ಸಲ್ಲಿಸಿದ ಅರ್ಜಿಯಾಗಿರುತ್ತದೆ. ನಿಪಿ-1 ರಲ್ಲಿ ಸಿದ್ದಪ್ಪ ಎಂದು ಸಹಿ ಮಾಡಿದ್ದು ನಿಡಿ-1 ರಲ್ಲಿ ಸಿದ್ದನಗೌಡ ಎಂದು ಸಹಿ ಮಾಡಿದ್ದಾರೆ. ನಿಪಿ-1 ಚಕ್ಕಿನಲಿ ಸಿದ್ದಪ್ಪ ಎಂದು ಸಹಿ ಮಾಡಿದ್ದು ಮತ್ತು ನಿಡಿ-1 ರಲ್ಲಿ ಎ.ಸಿದ್ದನಗೌಡ ಎಂದು ಸಹಿ ಮಾಡಿದ್ದಾರೆ. ಸಾಮಾನ್ಯವಾಗಿ ಬ್ಯಾಂಕ್ ನಲ್ಲಿ ಚಕ್ಕನ್ನು ನಗದೀಕರಣಕ್ಕೆ ಸಲ್ಲಿಸಿದ ಸಮಯದಲ್ಲಿ ಮೊದಲ ಬಾರಿಗೆ ಚಕ್ಕಿನಲ್ಲಿ ಮೊತ್ತವನ್ನು ಮತ್ತು ಸಹಿಯನ್ನು ಪರಿಶೀಲನೆ ಮಾಡಿ ನಂತರ ಖಾತೆಯಲ್ಲಿ ಹಣ ಇಲ್ಲದಿದ್ದರೆ ಸಾಕಷ್ಟು ಹಣ ಇಲ್ಲ ಎಂದು ಅಥವಾ ಸಹಿ ತಾಳೆ ಇಲ್ಲ ಎಂದು ಹಿಂಬರಹವನ್ನು ಕೊಡುತ್ತೇವೆ. ಮತ್ತು ಹಿಂಬರಹದಲ್ಲಿ 2 ಕಾರಣಗಳನ್ನು ನಮೂದಿಸಬಹುದು ಅಥವಾ ಒಂದು ಕಾರಣವನ್ನು ನಮೂದಿಸಬಹುದು ಎಂದು ನುಡಿಯುತ್ತಾರೆ.

## ಪಾಟೀ ಸವಾಲು :- ಫಿರ್ಯಾದುದಾರರ ಪರ ವಕೀಲರಿಂದಃ

ಸಾಮಾನ್ಯವಾಗಿ ಖಾತೆಯನ್ನು ತೆರೆಯಲು ಸಲ್ಲಿಸಿದ ಅರ್ಜಿಯ ಜೊತೆಯಲ್ಲಿ ಮಾದರಿ ಸಹಿ ಯನ್ನು ಸಹ ಪ್ರತ್ಯೇಕವಾದ ಹಾಳೆಯಲ್ಲಿ ಸಲ್ಲಿಸುತ್ತಾರೆ ಎಂದರೆ ಸರಿ. ಕರ್ನಾಟಕ ಬ್ಯಾಂಕ್ ನಲ್ಲಿ ಖಾತೆ ಹೊಂದಿದ್ದರೆ ಯಾವುದೇ ಬ್ಯಾಂಕ್ ನಲ್ಲಾದರೂ ಚಕ್ಕನ್ನು ನಗದೀಕರಣಕ್ಕೆ ಸಲ್ಲಿಸಿದಾಗ ಆ ಸಮಯದಲ್ಲಿ ಸದರಿ ಬ್ಯಾಂಕ್ ನವರು ಸದರಿ ಚಕ್ ನ ಖಾತೆದಾರರ ಖಾತೆಯಲ್ಲಿ ಹಣ ಇದೆಯೇ ಅಥವಾ ಇಲ್ಲ ಎಂಬುದರ ಬಗ್ಗೆ ಹಿಂಬರಹವನ್ನು ಸದರಿ ಬ್ಯಾಂಕ್ ನವರು ಕೊಡಬಹುದು.

## ಪಾಟೀ ಸವಾಲು ನ್ಯಾಯಾಲಯದ ಅನುಮತಿಯೊಂದಿಗೆ ಆರೋಪಿಪರ ವಕೀಲರಿಂದಃ-

ನಿಪಿ-**1** ಓಪನ್ ಚಕ್ ಎಂದರೆ ಸರಿ. ಸಾಮಾನ್ಯವಾಗಿ ಯಾವುದಾದರೂ ಒಂದು ಚಕ್ಕು ನಗದೀಕರಣಕ್ಕೆ ಬಂದ ಸಮಯದಲ್ಲಿ ಸದರಿ ಚಕ್ಕು ಕ್ರಾಸ್ ಚೆಕ್ ಅಥವಾ ಓಪನ್ ಚೆಕ್ ಎಂಬುದರ ಬಗ್ಗೆ ಪರಿಶೀಲನೆ ಮಾಡುತ್ತೇವೆ. ಕರ್ನಾಟಕ ಬ್ಯಾಂಕ್ ಗೆ ಸಂಬಂಧಪಟ್ಟ ಚಕ್ಕನ್ನು ಹಾಜರುಪಡಿಸಿದಾಗ ನಗದೀಕರಣದ ಪೂರ್ವದಲ್ಲಿ ಸಹಿಯನ್ನು ಸಹ ಪರಿಶೀಲನೆ ಮಾಡುತ್ತೇವೆ ಎಂದರೆ ಸರಿ. ನಿಡಿ-**1** ಅರ್ಜಿಯಲ್ಲಿ ಎ.ಸಿದ್ದನಗೌಡ ಎಂಬ ಸಹಿ ನಮೂದಾಗಿದ್ದು ಮತ್ತು ನಿಪಿ-**1** ರಲ್ಲಿ ಸಿದ್ದಪ್ಪ ಎಂದು ನಮೂದಾಗಿದ್ದು ಆ ಕಾರಣದಿಂದ ಸಹಿ ತಾಳೆ ಆಗುವುದಿಲ್ಲ ಎಂದು ಹಿಂಬರಹವನ್ನು ಕೊಡಬಹುದು ಎಂದರೆ ಸರಿ. ಸಾಮಾನ್ಯವಾಗಿ ಖಾಲಿ ಓಪನ್ ಚಕ್ಕು ಯಾರಿಗಾದರೂ ವ್ಯಕ್ತಿಗೆ ಸಿಕ್ಕರೆ ತನ್ನ ಹೆಸರನ್ನು ನಮೂದು ಮಾಡಿಕೊಂಡು ನಗದೀಕರಣಕ್ಕೆ ಸಲ್ಲಿಸಬಹುದು ಎಂದರೆ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಯಾವುದೇ ಖಾತೆದಾರರು ತನ್ನ ಚಕ್ಕು ಕಳುವಾಗಿದೆ ಎಂದು ಬ್ಯಾಂಕ್ ಗೆ ಅರ್ಜಿಯನ್ನು ಸಲ್ಲಿಸಿದರೆ ತಕ್ಷಣವೇ ಕಳುವಾದ ಚಕ್ಕಿಗೆ ಸಂಬಂಧಪಟ್ಟಂತೆ ನಗದೀಕರಣಕ್ಕೆ ತಡೆಯನ್ನುಂಟು ಮಾಡುತ್ತೇವೆ. ಅಂತಹ ಸಮಯದಲ್ಲಿ ಚಕ್ಕನ್ನು ನಗದೀಕರಣಕ್ಕೆ ಸಲ್ಲಿಸಿದಾಗ **stop payment** ಎಂದು ಹಿಂಬರಹವನ್ನು ಕೊಡುತ್ತೇವೆ. ಸಾಮಾನ್ಯವಾಗಿ ಖಾತೆದಾರರು ತನಗೆ ಸಂಬಂಧಪಟ್ಟ ಯಾವುದಾದರೂ ಒಂದು ಚಕ್ಕು ಕಳ್ಳತನವಾಗಿದ್ದರೆ ಸದರಿ ಚಕ್ಕನ್ನು ತಡೆಹಿಡಿಯುವಂತೆ ಅರ್ಜಿಯನ್ನು ಸಲ್ಲಿಸಿದಾಗ ಸಂಬಂಧಪಟ್ಟ ಪುಸ್ತಕದಲ್ಲಿ ಮತ್ತು ಕಚೇರಿಯ ಸಿಸ್ಟಂ ನಲ್ಲಿ ನಮೂದು ಮಾಡಿ ಸದರಿ ಚಕ್ಕನ್ನು ತಡೆಹಿಡಿಯುತ್ತೇವೆ. ಸಾಮಾನ್ಯವಾಗಿ ಖಾತೆದಾರನು ತಾನು ಖಾತೆ ಹೊಂದಿದ ಶಾಖೆಗೆ ಕಳೆದುಹೋಗಿರುವ ಚಕ್ಕಿಗೆ ಸಂಬಂಧಿಸಿದಂತೆ **stop payment** ಮಾಡುವಂತೆ ಅರ್ಜಿಯನ್ನು ಸಲ್ಲಿಸಿದಾಗ ಕರ್ನಾಟಕ ಬ್ಯಾಂಕ್ ನ ಎಲ್ಲಾ ಶಾಖೆಗಳಲ್ಲಿ ಸದರಿ ಅರ್ಜಿಯ ಬಗ್ಗೆ ಸಿಸ್ಟಂ ನಲ್ಲಿ ನಮೂದಾಗಿರುತ್ತದೆ ಎಂದರೆ ಸರಿ.

ಖಾತೆದಾರರು ತಮ್ಮ ಖಾತೆಗೆ ಸಂಬಂಧಪಟ್ಟಂತೆ ಯಾವುದಾದರೂ ಶಾಖೆಯ ಕರ್ನಾಟಕ ಬ್ಯಾಂಕ್ ಚೆಕ್ಕು ಕಳೆದುಹೋಗಿದ್ದು ಮತ್ತು ಆ ಬಗ್ಗೆ ಅರ್ಜಿಯನ್ನು ಸಲ್ಲಿಸಿದರೆ ನಮ್ಮ ಬ್ಯಾಂಕ್ ನಲ್ಲಿ ಸಿಸ್ಟಂ ನಲ್ಲಿ ನಮೂದಾಗಿರುತ್ತದೆ. ನಿಡಿ-**1** ರ ಅರ್ಜಿದಾರರು ಬೆಳಗುತ್ತಿ ಕರ್ನಾಟಕ ಬ್ಯಾಂಕ್ ಶಾಖೆಗೆ ನಿಪಿ-**1** ಚೆಕ್ಕು ಮತ್ತು ಚೆಕ್ ನಂ.**182313** ರ ಚೆಕ್ಕು ಕಳೆದು ಹೋಗಿರುವ ಬಗ್ಗೆ ದಿಃ **03-09-2019** ರಂದು ಅರ್ಜಿಯನ್ನು ಸಲ್ಲಿಸಿದ್ದರೆ ನಮ್ಮ ಬ್ಯಾಂಕ್ ನಲ್ಲಿ ಸದರಿ ಅರ್ಜಿಯ ಬಗ್ಗೆ ಸಿಸ್ಟಂ ನಲ್ಲಿ ನಮೂದಾಗಿರುತ್ತದೆ. ಈ ಬಗ್ಗೆ ಅರ್ಜಿಯನ್ನು ಸಲ್ಲಿಸಿದ್ದರೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ.

ಮುಂದುವರೆದ ಪಾಟೀ ಸವಾಲಿಗೆ ಆರೋಪಿಯ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶಕೋರಿದ್ದು ನೀಡಿ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.